International Journal of Kannada Research 2017; 3(1): 01-04




International Journal of Kannada Research
www.kannadajournal.com

ISSN: 2454–5813
IJSR 2017; 3(1): 01-04
© 2017 IJKS
www.kannadajournal.com
Received: 01-11-2016
Accepted: 01-12-2016

**Shridhar B Nayak**
B. G. V. S. Arts and Commerce College, Karnataka, India

**Correspondence**
**Shridhar B Nayak**
B. G. V. S. Arts and Commerce College, Karnataka, India

# ಮೋಹನ ಹಬ್ಬು ಅವರ ಕಥಾಲೋಕ

**Shridhar B Nayak**

ಉತ್ತರ ಕನ್ನಡ ಜಿಲ್ಲೆಯ ಯಶವಂತ ಚಿತ್ತಾಲ, ಜಯಂತ ಕಾಯ್ಕಿಣಿ, ವಿವೇಕ ಶಾನಭಾಗ, ಶ್ರೀಧರ ಬಳಗಾರ, ರಾಮಕೃಷ್ಣ ಗುಂದಿ,ಶ್ರೀಮತಿ ಭಾಗಿರಥಿ ಹೆಗಡೆ,ಸುನಂದಾ ಕಡಮೆ,ಡಾ.ವಿನಯಾ ಮುಂತಾದವರು ತಮ್ಮ ವಿಶಿಷ್ಟ ಕತೆಗಳ ಮೂಲಕ ಸಣ್ಣಕಥಾಕ್ಷೇತ್ರದಲ್ಲಿ ತಮ್ಮದೇ ಆದ ವಿಶೇಷ ಸ್ಥಾನ ಪಡೆದುಕೊಂಡಿದ್ದಾರೆ. ಪ್ರೊ. ಮೋಹನ ಹಬ್ಬು ಈ ಸಾಲಿನಲ್ಲಿ ನಿಲ್ಲಬಲ್ಲ ಮತ್ತೊಬ್ಬ ಕತೆಗಾರ. ಪ್ರೊ.ಮೋಹನ ಹಬ್ಬು ಅವರು ಮೂಲತ: ಭೌತಶಾಸ್ತ್ರದ ಪ್ರಾಧ್ಯಾಪಕರು.ಅಂಕೋಲಾದ ಗೋಖಲೆ ಸೆಂಟನರಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಂತರ ಕಾರವಾರದ ದಿವೇಕರ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ನಿವೃತ್ತಿ ಹೊಂದಿದ್ದಾರೆ.ವೃತ್ತಿ ಬದುಕಿನಾಚೆಗೆ ಸಾಂಸ್ಕೃತಿಕ ವ್ಯಕ್ತಿತ್ವ ಪಡೆದಿರುವ ಪ್ರೊ.ಹಬ್ಬು ಅವರು ಬಹುಮುಖ ಪ್ರತಿಭೆ.ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರು ಕೃಷಿ ಮಾಡಿದ್ದಾರೆ.ನಾಲ್ಕು ಕವನ ಸಂಕಲನಗಳು, ಮೂರು ನಾಟಕಗಳು,ಎರಡು ಕಥಾಸಂಕಲನಗಳು, ಎರಡು ವೈಜ್ಞಾನಿಕ ಬರಹಗಳ ಸಂಕಲನ,ಎರಡು ವಿಮರ್ಶಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವನ್ನು ಹೊರತು ಪಡಿಸಿ ಐದು ಕೃತಿಗಳನ್ನು ಅನುವಾದಿಸಿದ್ದಾರೆ.ಏಳು ಪುಸ್ತಕಗಳನ್ನು ಸಂಪಾದಿಸಿದ್ದಾರೆ.ಲೇಖಕರಾಗಿ ಮಾತ್ರವಲ್ಲ,ನಟ.ನಿರ್ದೇಶಕ,ಗಾಯಕರಾಗಿಯೂ ತಮ್ಮ ವ್ಯಕ್ತಿತ್ವದ ಛಾಪು ಮೂಡಿಸಿದ್ದಾರೆ. ಈ ಲೇಖನದಲ್ಲಿ ಮೋಹನ ಹಬ್ಬು ಅವರ ಕಥೆಗಳ ವಿಶಿಷ್ಟತೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

“ವೈಶಾಖದ ಮಳೆ” ಮತ್ತು “ವೃತ್ತದೊಳಗೊಂದು ವೃತ್ತ” ಇವು ಮೋಹನಹಬ್ಬು ಅವರ ಪ್ರಕಟಿತ ಕಥಾ ಸಂಕಲನಗಳು.ಇನ್ನೊಂದು ಸಂಕಲನಕ್ಕಾಗುವಷ್ಟು ಅಪ್ರಕಟಿತ ಕತೆಗಳಿವೆ. ತಮ್ಮ ಕತೆಗಳಿಗಾಗಿ 2007 ರಲ್ಲಿ ಪ್ರಜಾವಾಣಿ ದಿನಪತ್ರಿಕೆಯ ದೀಪಾವಳಿ ಕಥಾಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಮತ್ತು 2010ರಲ್ಲಿ ಹಣತೆ ಪತ್ರಿಕೆಯ ವಿಶೇಷಾಂಕದ ರಾಜ್ಯಮಟ್ಟದ ಸ್ಪರ್ದೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಇದು ಅವರ ಕತೆಗಳ ಮೌಲ್ಯವನ್ನು ಸೂಚಿಸುತ್ತದೆ. ಹಬ್ಬು ಅವರ ಕಥಾಲೋಕ ವೈವಿಧ್ಯಮಯ ಅನುಭವಗಳ ರಸಪಾಕ. ಅವರೇ ಹೇಳಿಕೊಂಡಂತೆ, ಅವರು ಆಯ್ದುಕೊಂಡ ಕಥಾವಸ್ತುಗಳು ಮತ್ತು ಪಾತ್ರಗಳು ತನ್ನ ಸುತ್ತಣ ಪ್ರಪಂಚಕ್ಕೆ ಸಂಬಂಧಿಸಿದವುಗಳೇ ಆಗಿವೆ. ಇಲ್ಲಿ ಚಿತ್ರಿಸಿರುವ ಪಾತ್ರಗಳು ಅವರ ಬಾಳ ಪಯಣದಲ್ಲಿ ಕಂಡ ಸಂಗಾತಿಗಳೇ ಆಗಿದ್ದಾರೆ. ಆದರೆ, ತಾವು ಕಂಡುಂಡ ಘಟನೆಗಳ ವಿಶಿಷ್ಟತೆಯನ್ನು ಅವರು ತಮ್ಮದನ್ನಾಗಿಸಿ ಅವುಗಳಿಗೆ ಕತೆಯ ಆವರಣ ತೊಡಿಸಿದ್ದಾರೆ.ಆದರೆ, “ವಿಶಿಷ್ಟ ಅನುಭವ ನೀಡುವ ಲೋಕವೊಂದೇ ಲೇಖಕನನ್ನು ರೂಪಿಸಲಾರದು. ಇಲ್ಲದಿದ್ದರೆ, ಹೊಸದಾಗಿ ಅಲ್ಲಿಗೆ ಹೋದ ವ್ಯಕ್ತಿಗಿಂತ ಅಲ್ಲಿಯೇ ಇರುವವರು ದೊಡ್ಡ ಲೇಖಕರಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ಏಕೆಂದರೆ ಆ ಅನುಭವಗಳನ್ನು ವಿಶೇಷ ಎಂದು ತಿಳಿಯುವ ಪ್ರಜ್ಞೆಯನ್ನು ಪಡೆದುಕೊಂಡಾಗ ಮಾತ್ರ ಅವು ಲೇಖಕರಿಗೆ ವಸ್ತುಗಳಾಗುತ್ತವೆ. ಅವುಗಳನ್ನು ತಮ್ಮೊಳಗೆ ಹಾಯಿಸಿಕೊಂಡು ಮತ್ತೆ ಪ್ರಕಟಿಸುವ ಕಲೆಗಾರಿಕೆ ಇದ್ದಾಗ ಕತೆಗಳಾಗುತ್ತವೆ” (ರಹಮತ್ ತರೀಕೆರೆ). ಇಂತಹ ಪ್ರಜ್ಞೆ ಮತ್ತು ಕಲೆಗಾರಿಕೆಗಳು ಹಬ್ಬು ಅವರಿಗೆ ಸಿದ್ಧಿಸಿರುವುದರಿಂದಲೇ ಅವರೊಬ್ಬ ಯಶಸ್ವಿ ಕಥೆಗಾರರಾಗಿ ಪರಿಗಣಿತರಾಗುತ್ತಾರೆ. ಅವರ ಕತೆಗಳಲ್ಲಿ ಮಾನವೀಯ ಅಂತಃಕರಣದ ಶೋಧವಿದೆ. ಬದುಕಿನಲ್ಲಿ ದ್ವಂದ್ವಗಳು ಹುಟ್ಟು ಹಾಕಿದ ಬಿಕ್ಕಟ್ಟುಗಳನ್ನು ದೃಢತೆಯಿಂದ ಎದುರಿಸಿದ ಗಟ್ಟಿ ವ್ಯಕ್ತಿತ್ವಗಳ ಚಿತ್ರಣವಿದೆ. ಅವರ ಕಥೆಯ ಪಾತ್ರಗಳು ಯಾವುದೇ ಸಂದರ್ಭದಲ್ಲಿಯೂ ಜೀವನಪ್ರೀತಿಯನ್ನು ಬಿಟ್ಟು ಕೊಡುವುದಿಲ್ಲ. ಹಬ್ಬು ಅವರ ಕಥೆಗಳಲ್ಲಿ ಕೆಲವು ಕಥೆಗಳ ವಸ್ತುಗಳು ಅತ್ಯಂತ ಪ್ರಬುದ್ಧವಾಗಿವೆ. ಮತ್ತೆ ಕೆಲವು ಕಥೆಗಳು ಸಾಮಾನ್ಯ ವಸ್ತುವನ್ನು ಒಳಗೊಂಡಿದ್ದರೂ ನಿರೂಪಣೆಯ ದೃಷ್ಟಿಯಿಂದ ಗಮನ ಸೆಳೆಯುತ್ತವೆ.

ಜಾಗತೀಕರಣ, ವಿದೇಶೀ ವ್ಯಾಮೋಹ, ಅಭಿವೃದ್ಧಿ ಎಂಬ ಭ್ರಮೆ, ಶಿಥಿಲವಾಗುತ್ತಿರುವ ಮನುಷ್ಯ ಸಂಬಂಧಗಳು, ತಮ್ಮ ಅಸ್ತಿತ್ವನ್ನು ಕಂಡುಕೊಳ್ಳಬೇಕಾದ ಮಹಾತ್ವಾಕಾಂಕ್ಷೆಗಳು ತಂದೊಡ್ಡುವ

ಸಂಘರ್ಷಗಳನ್ನು ಒಳಗೊಂಡ ವಸ್ತುಗಳನ್ನು ಕಥೆಗಳನ್ನಾಗಿ ನಿರೂಪಿಸುವಾಗ ಹಬ್ಬು ಅವರ ಪ್ರಬುದ್ಧತೆ ಗಮನ ಸೆಳೆಯುತ್ತದೆ. ಆಧುನಿಕ ಜಗತ್ತಿನಲ್ಲಿ ಮನುಷ್ಯ ಸಂಬಂಧಗಳು ಕೇವಲ ವ್ಯಾವಹಾರಿಕ ಎನ್ನುವಷ್ಟರ ಮಟ್ಟಿಗೆ ಬದಲಾಗುತ್ತದೆ ಮಹಾತ್ವಾಕಾಂಕ್ಷಿಗಳಾಧ ಮಕ್ಕಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಧಾವಂತದಲ್ಲಿ ತಂದೆ–ತಾಯಿಗಳೆಂಬ ಕರುಳ ಸಂಬಂಧಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ದಾರುಣತೆಯಲ್ಲಿ ಇದ್ದಾರೆ. ಹುಸಿ ಪ್ರತಿಷ್ಠೆ, ಸ್ಥಾನ ಮಾನಗಳ ಭ್ರಮೆಯಲ್ಲಿ ಮೂಲ ಬೇರುಗಳನ್ನು ಕಳಚಿಕೊಂಡು ತಾವು ಅತಂತ್ರವಾಗುವ, ತಮ್ಮನ್ನು ನಂಬಿದವರನ್ನು ಅತಂತ್ರವಾಗಿಸುವ ಹುನ್ನಾರದಲ್ಲಿದ್ದಾರೆ. ಒಂದು ರೀತಿಯ ನಂಬಿಕೆ ದ್ರೋಹದ ಪ್ರಕ್ರಿಯೆ ಇಲ್ಲಿ ನಡೆಯುತ್ತದೆ. 'ನೀರ ಮೇಲಣ ಗುಳ್ಳೆ' ಕಥೆ ಈ ಅಂಶವನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ನೆನಪುಗಳ ಕಾರಣಕ್ಕೆ ಮಹಾನಗರವಾಗಿ ಬೆಳೆಯುತ್ತಿರುವ ಆಯಕಟ್ಟಿನ ಜಾಗದಲ್ಲಿರುವ ಮನೆಯನ್ನು ಮಾರಲೊಪ್ಪದ ನಿವೃತ್ತ ಮೇಷ್ಟ್ರ ಶ್ರೀಕಂಠಯ್ಯ ವಿದೇಶದಲ್ಲಿರುವ ಮಗನ ಸ್ವಂತ ಉದ್ಯೋಗದ ಆಸೆಯನ್ನು ಈಡೇರಿಸುವ ಉದ್ದೇಶದಿಂದ ಮನೆ ಮಾರಾಟ ಮಾಡುತ್ತಾರೆ. ಅಪ್ಪನನ್ನು ವಿದೇಶಕ್ಕೆ ಕರೆದುಕೊಂಡು ಹೋಗುವ ಆಮಿಷ ಒಡ್ಡಿದ ಮಗ ಅವರನ್ನು ವಿಮಾನ ನಿಲ್ದಾಣದಲ್ಲಿ ಒಬ್ಬಂಟಿಯಾಗಿ ಬಿಟ್ಟು ಅಪ್ಪನ ಹಣ ಲಪಟಾಯಿಸಿ ಹೆಂಡತಿ ಮಕ್ಕಳೊಂದಿಗೆ ಹಾರಿ ಹೋಗುತ್ತಾನೆ. ಎಲ್ಲವನ್ನು ಕಳೆದುಕೊಂಡ ಶ್ರೀಕಂಠಯ್ಯ ಜಗತ್ತು, ಸಂಸಾರ, ಸಂಬಂಧ, ಬದುಕಿನ ಅರ್ಥಗಳ ಗೋಜಲಿನಲ್ಲಿ ಅನಾಥರಾಗುತ್ತಾರೆ. ಆಧುನಿಕತೆ ತಂದೊಡ್ಡುತ್ತಿರುವ ಅಪಾಯಗಳನ್ನು ಕಥೆಗಾರರು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಹುಟ್ಟಿಗೆ ಕಾರಣವಾದ ಅಪ್ಪನನ್ನೇ ಯಾಮಾರಿಸುವ ದುಷ್ಟತನವನ್ನು ಆಧುನಿಕ ಶಿಕ್ಷಣ ಪಡೆದ ನಾಗರಿಕ ಮನುಷ್ಯ ರೂಢಿಸಿಕೊಳ್ಳುತ್ತಿರುವುದು ಮಾನವೀಯತೆಯನ್ನೇ ಪ್ರಶ್ನಿಸುವಂತಿದೆ. ಸಂಬಂಧಗಳು ನೀರ ಮೇಲಿನ ಗುಳ್ಳೆಗಳಂತಾದರೂ ನೀರು ಹರಿಯುತ್ತಲೇ ಇರಬೇಕು. ಬದುಕಿನ ಪಯಣ ಮುಂದುವರಿಯಲೇಬೇಕು ಎಂಬುದನ್ನು ಧ್ವನಿಸುವಂತೆ ಕಥೆಯ ಕೊನೆಯಲ್ಲಿ ಬಸ್ಸಿಗಾಗಿ ಕಾಯುತ್ತ ನಿಂತ ಶ್ರೀಕಂಠಯ್ಯನವರ ಚಿತ್ರವನ್ನು ನೀಡುತ್ತಾರೆ. ಗಂಭೀರ ನಿರೂಪಣೆಯಿಂದ ಗಮನ ಸೆಳೆಯುವ ಈ ಕತೆಯ ಅಂತ್ಯ ಓದುಗರಿಗೆ ಶಾಕ್ ನೀಡುವಂತಿದೆ.

ಮನುಷ್ಯ ಸಂಬಂಧಗಳ ನಡುವಿನ ಅರ್ಥಹೀನತೆಯನ್ನು ಪ್ರತಿಪಾದಿಸುವ ಇನ್ನೊಂದು ಕಥೆ 'ಇರುವುದೆಲ್ಲವ ಬಿಟ್ಟು'. ಮಲೆನಾಡಿನ ಮೂಲೆಯಲ್ಲಿ ಕೃಷಿಯನ್ನು ಅವಲಂಬಿಸಿ ತೋಟ ಪಟ್ಟಿ ಮಾಡಿಕೊಂಡು ಬದುಕನ್ನು ಸಾಗಿಸುತ್ತಿದ್ದ ಪರಮೇಶ್ವರ ಹೆಗಡೆಯವರಿಗೆ ಹಿರಿಯ ಮಗ ವಿದ್ಯಾವಂತನಾಗಿ ಮೂಲವನ್ನು ಮರೆತು ದೇಶ ವಿದೇಶ ಎಂದು ಸುತ್ತುತ್ತಿರುವಾಗ ಕಿರಿಯ ಮಗನಾದರೂ ತೋಟ ಪಟ್ಟಿ ನೋಡಿಕೊಂಡಿರಲಿ ಎಂಬ ಹಂಬಲ. ಆದರೆ, ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೊಂಡ ಅವನಿಗೂ ತನ್ನ ಭವಿಷ್ಯವನ್ನು ತಾನು ರೂಪಿಸಿಕೊಳ್ಳುವ ಹಟ. ಈ ತಲೆಮಾರುಗಳ ಸಂಘರ್ಷದಲ್ಲಿ ಪರಮೇಶ್ವರ ಹೆಗಡೆ ಅಸಹಾಯಕರಾಗುತ್ತಾರೆ. ಹಿರಿಯ ಮಗ ತನ್ನ ಜೀವನಕ್ರಮಕ್ಕೆ ಹೊಂದಿಕೊಳ್ಳುವ ವಿದೇಶೀ ಹುಡುಗಿಯನ್ನು ವಿವಾಹವಾಗುವ ತೀರ್ಮಾನ ಪ್ರಕಟಿಸಿದಾಗ ಅವರ ಅಸಮಾಧಾನ ಇನ್ನಷ್ಟು ಹೆಚ್ಚುತ್ತದೆ. ಈ ನಡುವೆ ಮಗಳು ಅಣ್ಣನ ಸ್ನೇಹಿತ ಮೋಹಜಾಲದಲ್ಲಿ ಸಿಲುಕಿದ್ದಾಳೆ ಎಂಬ ಅನುಮಾನ ಅವರಲ್ಲಿ ಆಕ್ರೋಶ ಮೂಡಿಸುತ್ತದೆ. ಪರಮೇಶ್ವರ ಹೆಗಡೆಯವರ ಈ ಮಾನಸಿಕ ಸಂಘರ್ಷವನ್ನು ಕಥೆಗಾರರು ಪ್ರಭಾವಶಾಲಿಯಾಗಿ ಚಿತ್ರಿಸುತ್ತಾರೆ. ಮಗಳು ಓದುವ ಪುಸ್ತಕ ಬೆಂಕಿಗೆ ಆಹುತಿಯಾದರೆ, ಪುಸ್ತಕದಲ್ಲಿದ್ದ ಭಾವಚಿತ್ರ ಹರಿದು ಚಿಂದಿಯಾಗುತ್ತದೆ. ಅವರ ಆಕ್ರೋಶ ಇಷ್ಟಕ್ಕೆ ನಿಲ್ಲದೆ ಗೊನೆಯ ಭಾರದಿಂದ ತೂಗಾಡುತ್ತಿದ್ದ ಬಾಳೆಗಿಡವನ್ನು ಕತ್ತರಿಸುವಂತೆ ಮಾಡುತ್ತದೆ. ಇದಕ್ಕೆ ಹೊಂದಿಕೊಂಡಂತೆ ಬರುವ ತಿಮ್ಮಪ್ಪ ಹೆಗಡೆಯ ಮನೆಯ ಕಥೆ ಹೆಚ್ಚಿನ ಸಂಘರ್ಷವಿಲ್ಲದೆ ಸಾಗುತ್ತದೆ. ಒಂದು ಕುಟುಂಬದ ಮಕ್ಕಳು ಮಹಾತ್ವಾಕಾಂಕ್ಷೆಯನ್ನು ಹೊಂದಿ ಹಿರಿಯರೊಂದಿಗೆ ಸಂಘರ್ಷದ ದಾರಿ ತುಳಿಯಲು ಸಿದ್ಧರಾದರೆ, ಇನ್ನೊಂದು ಕುಟುಂಬದ ಮಕ್ಕಳು ಪಾಲಿಗೆ ಬಂದಿದ್ದನ್ನು ಸ್ವೀಕರಿಸುವ ಹೊಂದಾಣಿಕೆಯ ಮನೋಭಾವವನ್ನು ಪ್ರದರ್ಶಿಸುತ್ತಾರೆ. ಇಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಓದುಗರ ನಿರ್ಧಾರಕ್ಕೆ ಬಿಡುವ ಕಥೆಗಾರರು ಕಥಾವಸ್ತುವಿನಲ್ಲಿ ಯಾವುದೇ ಹಸ್ತಕ್ಷೇಪವನ್ನು ಮಾಡುವುದಿಲ್ಲ. ಮಾನವೀಯ ಸಂಬಂಧಗಳ ಸಂಘರ್ಷವನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸುವ ಮತ್ತೊಂದು ಕಥೆ 'ಪಾಲಿಗೆ ಬಂದದ್ದು'. ಇತ್ತೀಚಿನ ದಿನಗಳಲ್ಲಿ ಮಾಯವಾಗುತ್ತಿರುವ ಅವಿಭಕ್ತ ಕುಟುಂಬಗಳಲ್ಲಿ ಯಜಮಾನಿಕೆ ವಹಿಸಿಕೊಂಡವನು ಸಂಕಟಗಳೆದುರಾದಾಗ ತೋರಿಸಬೇಕಾದ ಧೈರ್ಯ, ಅಪವಾದಗಳು ಬಂದಾಗ ತೋರಿಸಬೇಕಾದ ಸಂಯಮ ಗುಣವನ್ನು ನಿರೂಪಿಸುವಲ್ಲಿ ಕಥೆ ಯಶಸ್ವಿಯಾಗಿದೆ. ತನ್ನ ಹೆಂಡತಿ ಮಕ್ಕಳ ಕುರಿತು ಒಂದು ದಿನವೂ ಆಲೋಚಿಸದ ಹೆಗಡೆಯವರು, ತಮ್ಮಂದಿರು ಮತ್ತು ತಮ್ಮಂದಿರ ಕುಟುಂಬದ ಕುರಿತು ಕಾಳಜಿ ವಹಿಸುತ್ತಾರೆ. ಕೊನೆಗೆ ಅದೇ ಸುಶಿಕ್ಷಿತ ತಮ್ಮಂದಿರು ಯಜಮಾನಿಕೆ ಹೊತ್ತ ಅಣ್ಣನ ಪ್ರಾಮಾಣಿಕತೆಯನ್ನೇ ಪ್ರಶ್ನಿಸಿಬಿಡುತ್ತಾರೆ. ಸಂಬಂಧಗಳ ನಡುವೆ ನುಸುಳುವ ವ್ಯಾವಹಾರಿಕತೆ ತಂದೊಡ್ಡುವ ಸವಾಲುಗಳು ಸಂಬಂಧಗಳನ್ನು ಶಿಥಿಲಗೊಳಿಸುವ ಪರಿಯನ್ನು ಸಶಕ್ತವಾಗಿ ಅಭಿವ್ಯಕ್ತಿಸಿದ್ದಾರೆ.

ಇತ್ತೀಚಿನ ಕಥೆಗಾರರು ತಾವು ಬದುಕುವ ಸಾಮಾಜಿಕ ಪರಿಸರದ ವೃತ್ತದಿಂದಾಚೆ ದೃಷ್ಟಿ ಹರಿಸಿ ಕಥಾವಸ್ತುವಿನ ಅನ್ವೇಷಣೆಗೆ ತೊಡಗುತ್ತಾರೆ. ಆ ಮೂಲಕ ತಮ್ಮ ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸುತ್ತಾರೆ. 'ದಾರಿ ತೋರು ಬೆಳಕೇ!' ಕಥೆ ಇದಕ್ಕೆ ಸ್ಪಷ್ಟ ಉದಾಹರಣೆ. ದಲಿತ ಪ್ರಜ್ಞೆಯನ್ನು ಪ್ರಜ್ಞಾಪೂರ್ವಕವಾಗಿ ಆವಾಹಿಸಿಕೊಂಡ ಕಥೆಗಾರ ಈ ಕಥಾವಸ್ತುವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಬದಲಾವಣೆಯ ತಿರುವಿನಲ್ಲಿರುವ ದಲಿತ ಸಮುದಾಯದ ಯಂಕ ತನ್ನ ಬದುಕಿನ ಹಾಗೆ ತನ್ನ ಮಗನ ಬದುಕು ಜೀತಕ್ಕೆ ಒಳಗಾಗಬಾರದೆಂದು ಒಡೆಯರ ಹಂಗಿನಲ್ಲಿ ಬ್ಯಾಂಕಿನಿಂದ ಸಾಲ ಪಡೆದು ಎತ್ತಿನ ಗಾಡಿಯ ಯಜಮಾನನಾಗುವ ಕನಸನ್ನು ನನಸು ಮಾಡಿಕೊಳ್ಳುತ್ತಾನೆ. ಪ್ರಾರಂಭದಲ್ಲಿ ಉತ್ಸಾಹದಿಂದ ಕೆಲಸದಲ್ಲಿ ತೊಡಗಿದರೂ, ಆಗೀಗ ಒಡೆಯರ ಮನೆಯ ಗದ್ದೆಯ ಕೆಲಸಕ್ಕೆ ಎತ್ತುಗಳನ್ನು ಒಪ್ಪಿಸುವುದು ಅನಿವಾರ್ಯವಾಗುತ್ತದೆ. ಈ ನಡುವೆ ಸಣ್ಣೊಡೆಯರ ಕಣ್ಣು ಅವನ ಮಗಳೂ ಸುಶೀಲಳ ಬಿದ್ದು ಅವಳ ಬದುಕನ್ನು ಹಾಳುಗೆಡವುತ್ತದೆ. ಅಂತಹ ಸಂದರ್ಭದಲ್ಲಿ ಏನನ್ನೂ ಮಾಡಲಾಗದ ಅಸಹಾಯಕತೆ ಆ ಮನೆಯವರನ್ನು ಬಾಧಿಸುತ್ತದೆ. ಆಗ, ಚಿಕ್ಕವನಾಗಿದ್ದ ಸುರೇಶನ "ದೊಡ್ಡಾದ್ ಮ್ಯಾನೆ ನಾನ ದೊಡ್ ಸಾಯ್ಬ ಆಗ್ತಿ. ಶಣ್ಣ್ ಒಡೆಯನ ಎದೀ ಮ್ಯಾನೆ ಬೂಟ್‌ಗಾಲಲಿ ಹೊಡಿದೇ ಬಿಡ್ವಾಂಗೆಲ್ಲಾ" ಎಂಬ ಮಾತು ಹುಡುಗಾಟದ ಮಾತಾಗಿಯೇ ಗಮನಕ್ಕೆ ಬರುತ್ತದೆ. ಸೇಡು ತೀರಿಸಿಕೊಳ್ಳುವ ಆಕ್ರೋಶವಿದ್ದರೂ ವಾಸ್ತವದಲ್ಲಿ ಅದು ಸಾಧ್ಯವಾಗದೆ ಕನಸಿನಲ್ಲಿಯೇ ತನ್ನ ಆಕ್ರೋಶವನ್ನು ತೀರಿಸಿಕೊಳ್ಳುವ ದಲಿತನೊಬ್ಬನ ದಾರುಣತೆಯನ್ನು ಕಥೆಗಾರರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಶೋಷಣೆಯ ದುರಂತವನ್ನು ಕಟ್ಟಿಕೊಡುವಲ್ಲಿ ಈ ಕಥೆ ಯಶಸ್ವಿಯಾಗಿದೆ. ದಲಿತ ಜನಾಂಗದ ಭಾಷೆಯನ್ನು ಯಥಾವತ್ತಾಗಿ ಈ ಕಥೆಯಲ್ಲಿ ಬಳಸಿರುವುದರಿಂದ ಅದರ ಅನುಭವ ಇನ್ನಷ್ಟು ತೀವ್ರವಾಗಿದೆ.

ಕಿತ್ತು ತಿನ್ನುವ ಬಡತನ ಎಳೆಯ ವಯಸ್ಸಿನ ಹುಡುಗನೊಬ್ಬನ ಉತ್ಸಾಹವನ್ನು ಭಗ್ನಗೊಳಿಸುವ ವಸ್ತು 'ನಾಗು ಉಪಲೇ ತೇರಿಗೆ ಹೋಗಿದ್ದು' ಕಥೆಯಲ್ಲಿದೆ. ಕಲ್ಪನೆ ಮಾಡಿಕೊಳ್ಳುತ್ತಲೇ ತನ್ನ ಅರಿವನ್ನು ವಿಸ್ತರಿಸಿಕೊಳ್ಳುತ್ತಿರುವ ಹಂತದಲ್ಲಿರುವ ಬಾಲಕ ನಾಗುವಿಗೆ ಉಪಲೆ ತೇರಿಗೆ ಹೋಗುವ ಉತ್ಸಾಹವಿದೆ. ಅದಿನ್ನೂ ಎರಡು ತಿಂಗಳಿರುವಾಗಲೇ ಅದಕ್ಕೆ ಬೇಕಾದ ಸಿದ್ಧತೆಗೆ ತೊಡಗುತ್ತಾನೆ. ಮಾವ ಕೊಟ್ಟ ನಾಲ್ಕಾಣೆಯನ್ನು ಜೋಪಾನವಾಗಿ ಇಟ್ಟುಕೊಳ್ಳಲು ತಾಯಿಗೆ ಕೊಟ್ಟು ತನ್ನನ್ನು ಕರೆದುಕೊಂಡು ಹೋಗುವಂತೆ ಗೆಳೆಯರನ್ನು ಒಪ್ಪಿಸುತ್ತಾನೆ. ಜಾತ್ರೆಯ ದಿನ ಸಿಂಗಾರಗೊಂಡು ಮಾವ ಕೊಟ್ಟ ನಾಲ್ಕಾಣೆಯನ್ನು ಕೇಳಿದರೆ ಅದು ಅಪ್ಪನ ಬೀಡಿ ಪಾಲಾಗಿರುತ್ತದೆ. ನಿರಾಸೆ, ಹತಾಶೆ, ಅಸಹಾಯಕತೆಗಳಿಂದ ಪ್ರತಿಭಟಿಸಿದ ಅವನು ಅಪ್ಪನಿಂದ ಹೊಡೆತ ತಿಂದು ಗುಡಿಸಲ ಮೂಲೆ ಸೇರುತ್ತಾನೆ. ಶೀರ್ಷಿಕೆಯಲ್ಲಿ 'ತೇರಿಗೆ ಹೋಗಿದ್ದು' ಎಂಬುದು ಆಸೆ ಈಡೇರಿದ ಅರ್ಥವನ್ನು ಧ್ವನಿಸಿದರೆ ಕಥೆಯ ಮುಕ್ತಾಯ ಆಸೆ ಈಡೇರದ ವ್ಯಥೆಯನ್ನು ಹೇಳುತ್ತದೆ. ಜಯಂತ ಕಾಯ್ಕಿಣಿ ಹೇಳಿದಂತೆ 'ನಾಲ್ಕಾಣೆ ಇಲ್ಲದೆಯೂ ನಾಗು ಜಾತ್ರೆಗೆ ಹೋಗಿದ್ದರೆ' ಕಥೆ ಇನ್ನೂ ಹೆಚ್ಚಿನ ನೆಲೆಗೆ ಚಲಿಸುತ್ತಿತ್ತು. ಜಾತ್ರೆಗೆ ಹೋಗುವ ತಯಾರಿ ನಡೆಸುವ ನಾಗುವಿನ ಪಾತ್ರಚಿತ್ರಣದಲ್ಲಿ ಲವಲವಿಕೆ ಇದೆ. ಮಗುವಿನ ಮುಗ್ಧತೆಯನ್ನು ಅಭಿವ್ಯಕ್ತಿಸುವಲ್ಲಿ ನೈಜತೆ ಇದೆ.

ಕೌಟುಂಬಿಕ ಸಮಸ್ಯೆಗಳನ್ನು ಎದುರಿಸಲಾಗದೆ ಸಂಸಾರದಿಂದ ವಿಮುಖನಾಗುವ ವ್ಯಕ್ತಿಯೊಬ್ಬ ಮತ್ತೆ ಸಂಸಾರಕ್ಕೆ ಅಂಟಿಕೊಳ್ಳುವ ಮಾಯೆಯನ್ನು 'ವೃತ್ತದೊಳಗೊಂದು ವೃತ್ತ' ಕಥೆ ಅನಾವರಣಗೊಳಿಸುತ್ತದೆ. ತನ್ನ ಕೌಟುಂಬಿಕ ಸಮಸ್ಯೆಗಳೇ ದೊಡ್ಡದು ಎಂದು ಭಾವಿಸುವ ಶರ್ಮರು ಅವುಗಳಿಂದ ಬಿಡುಗಡೆ ಪಡೆಯಲು ಹೆಂಡತಿ ಮಕ್ಕಳನ್ನು ತೊರೆದು ದೇಶಾಂತರ ಹೊರಡುತ್ತಾರೆ. ಆದರೆ, ಮನೆಯಿಂದ ಹೊರಬಿದ್ದು ಅನಾಮಿಕರಾಗಿ ಅಲೆದಾಡುವ ಅವರಿಗೆ ದೊರೆತ ಅನುಭವಗಳು ಅವರ ಆಲೋಚನಾಕ್ರಮವನ್ನು ಬದಲಾಯಿಸುತ್ತದೆ. ಇತರರಿಗೆ ಹೋಲಿಸಿದರೆ ತನ್ನ ಸಮಸ್ಯೆಗಳು ಸಮಸ್ಯೆಗಳೇ ಅಲ್ಲ ಎಂಬ ಅರಿವು ಅವರಲ್ಲಿ ಸ್ಥಾಯಿಯಾಗುತ್ತದೆ. "ಸಂಸಾರದ ಸೆಳೆತ ಇಲ್ಲದಿದ್ದರೆ ಬದುಕಿನಲ್ಲಿ ಏನಿದೆ?" ಎಂಬ ಬಸಪ್ಪನ ಮಾತು ಶರ್ಮರ ಜೀವನಾನುಭವವನ್ನು ಪ್ರಶ್ನಿಸುವಂತೆ ಮಾಡುತ್ತದೆ. ತನ್ನ ಜೀವನವೃತ್ತದಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಶರ್ಮರು ಇನ್ನೊಂದು ವೃತ್ತದೊಳಗೆ ಸಿಲುಕುವ ಪರಿಸ್ಥಿತಿ ಎದುರಾದಾಗ ಮೊದಲಿನ ವೃತ್ತಕ್ಕೆ ಮರಳುತ್ತಾರೆ. ಹಾಗೆ ನೋಡಿದರೆ ಇಲ್ಲಿ ಶರ್ಮರ ಮಗ ಗೋಪಿಯ ಪಾತ್ರವನ್ನು ಕಥೆಗಾರರು ಪ್ರಬುದ್ಧವಾಗಿ ರೂಪಿಸಿದ್ದಾರೆ. ಪತ್ರ ಬರೆದಿಟ್ಟು ಅಪ್ಪ ಮನೆ ಬಿಟ್ಟು ಹೋದ ಸಂಗತಿಯನ್ನು ಅರಿತಾಗಲೂ ಎದೆಗುಂದದೆ ಅಮ್ಮನಿಗೆ ಧೈರ್ಯ ಹೇಳಿ ಮಾವನಲ್ಲಿಗೆ ಹೋಗುವ ಆತ ಪ್ರೌಢನಾಗಿ ಕಾಣುತ್ತಾನೆ. ಶರ್ಮರು ಮರಳಿ ಮನೆಗೆ ಬಂದಾಗ "ಮನೆ ಬಿಟ್ಟು ಹೋದವ ತಿರುಗಿ ಬಂದದ್ದು ಯಾಕೊ" ಎಂದು ಅಮ್ಮನಲ್ಲಿ ಹೇಳುವ ಮಾತು ಕಥೆಯ ಅರ್ಥಪರಂಪರೆಯನ್ನು ಹಿಗ್ಗಿಸುವ ಪ್ರಯತ್ನ ಮಾಡುತ್ತಾರೆ.

ಆಧುನಿಕ ಜಗತ್ತಿನಲ್ಲಿ ಮನುಷ್ಯ ಸಂಕುಚಿತಗೊಳ್ಳುತ್ತಿದ್ದಾನೆ. ಸಮಾಜದ ನೆರವು ಪಡೆದು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡರೂ ಆ ಸಮಾಜಕ್ಕೆ ಏನನ್ನೂ ತಿರುಗಿ ಕೊಡಲಾಗದ ಮನಸ್ಥಿತಿಯನ್ನು ಬೆಳೆಸಿಕೊಂಡಿದ್ದಾನೆ. ತನಗೆ ನೆರವು ನೀಡಿದವರಿಗೆ ತಾನು ಪ್ರತಿ ನೆರವು ನೀಡಬೇಕು ಎಂದುಕೊಂಡರೂ ಸಾಧ್ಯವಾಗದೆ ದ್ವಂದ್ವದಲ್ಲಿ ಸಿಕ್ಕು ನರಳುತ್ತಾನೆ. ನಾನು, ನನ್ನದು ಎಂಬ ಸ್ವಾರ್ಥದಲ್ಲಿ ಸಾಮಾಜಿಕ ಸಂಬಂಧಗಳನ್ನು ಕಳೆದುಕೊಳ್ಳುತ್ತಾನೆ. 'ಕುಬ್ಜ' ಕಥೆ ಇದನ್ನು ಅರ್ಥಪೂರ್ಣವಾಗಿ ನಿರೂಪಿಸುತ್ತದೆ. ತಾನು ಓದುವಾಗ ಸ್ನೇಹಿತನ ಮನೆಯಲ್ಲಿ ಆಶ್ರಯ ಪಡೆದ ನಿರೂಪಕ ತಾನು ವೃತ್ತಿ ಬದುಕನ್ನು ಪ್ರಾರಂಭಿಸಿದಾಗ ನೆರವು ಕೋರಿ ಬಂದ ಸ್ನೇಹಿತನ ಸಂಬಂಧಿಕರಿಗೆ ಸಹಾಯ ಮಾಡಲಾಗದೆ ಚಡಪಡಿಸುತ್ತಾನೆ. ಅವನ ನಿರಾಕರಣೆಗೆ ಅವನದೇ ಕಾರಣಗಳಿವೆಯಾದರೂ ಸ್ನೇಹಿತನ ಸಂಬಂಧಿಕರಿಗೆ ಅವು ಸಮರ್ಥನೀಯ ಎನಿಸಿಕೊಳ್ಳುವುದಿಲ್ಲ. ಅವರೆದುರಿಗೆ ನಿರೂಪಕ ತಾನು ಚಿಕ್ಕವನಾದಂತೆ ಭಾವಿಸಿಕೊಳ್ಳುತ್ತಾನೆ. ಅನಿವಾರ್ಯತೆ ಹುಟ್ಟುಹಾಕುವ ಅಸಹಾಯಕತೆಯ ವಾಸ್ತವ ಚಿತ್ರಣ ಈ ಕತೆಯಲ್ಲಿದೆ.

ಅಭಿವೃದ್ಧಿ ಎಂಬ ಭ್ರಮೆ ನಮ್ಮ ಕೃಷಿ ಸಂಸ್ಕೃತಿಯನ್ನು ವಿನಾಶದಂಚಿಗೆ ತಂದೊಡ್ಡಿದೆ. ಫಲವತ್ತಾದ ಬೆಳೆ ನೀಡುವ ಹೊಲಗದ್ದೆಗಳು ಅಭಿವೃದ್ಧಿಯ ಫಲಾನುಭವಿಗಳಾದ ಉಳ್ಳವರ ವಿಮಾನ ನಿಲ್ದಾಣಗಳಾಗಿಯೋ, ಕಾರಖಾನೆಗಳಾಗಿಯೋ ಪರಿವರ್ತಿತವಾಗುತ್ತಿವೆ. ಪರಿಹಾರವಾಗಿ ದೊರಕುವ ಹಣ ಭೂಮಿಯನ್ನೇ ಅವಲಂಬಿಸಿದ ರೈತರಲ್ಲಿ ದುಡಿಯದೇ ಸುಖವಾಗಿರುವ ವಿನಾಶಕಾರಿ ಕನಸನ್ನು ಬಿತ್ತುತ್ತವೆ. ಆದರೆ, ಭೂಮಿಯೊಡನೆ ಅವಿನಾಭಾವ ಸಂಬಂಧವನ್ನು ಹೊಂದಿದ ಹಳೆಯ ತಲೆಮಾರು ಕೃಷಿ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಶಕ್ತಿ ಮಿರಿ ಶ್ರಮಿಸುತ್ತದೆ. 'ಹಂತಿಯ ಹಾಡು' ಕತೆ ಇದನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಅಭಿವೃದ್ಧಿಯೆಂಬ ವಜ್ರಾಘಾತಕ್ಕೆ ಬಂಗಾರದ ಬೆಳೆ ಕೊಡುವ ಹೊಲ ಮಾತ್ರವಲ್ಲ, ಅದನ್ನು ಅವಲಂಬಿಸಿ ರೂಪಗೊಂಡ ಸಂಸ್ಕೃತಿ, ಜನಪದ ಸಾಹಿತ್ಯ ಎಲ್ಲವೂ ನಾಶವಾಗುತ್ತದೆ ಎಂಭ ವಿಷಾದ ಈ ಕತೆಯಲ್ಲಿದೆ. ಇದು ನಮ್ಮ ನೆಲಮೂಲ ಸಂಸ್ಕೃತಿಯನ್ನು ಕುರಿತು ಕತೆಗಾರ ಹೊಂದಿರುವ ಧೋರಣೆಯನ್ನು ಪ್ರತಿಬಿಂಬಿಸುತ್ತದೆ.

ಬಗೆಹರಿಯಲಾಗದ ಬದುಕಿನ ಜಂಜಾಟಗಳ ನಡುವೆಯೂ ಜೀವನಪ್ರೀತಿಯನ್ನು ಕಳೆದುಕೊಳ್ಳದ ಹಿರಿಯ ಜೀವವೊಂದು ತಾನು ನಂಬಿದವರಿಂದಲೇ 'ನಂಬಿಕೆದ್ರೋಹ'ಕ್ಕೊಳಗಾದಾಗ ಅನುಭವಿಸುವ ಮಾನಸಿಕ ಯಾತನೆಯನ್ನು 'ಬರಡುಗಾಯಿ' ಕತೆ ಚಿತ್ರಿಸುತ್ತದೆ. ವಿಕಲಚೇತನ ಮಕ್ಕಳನ್ನು ಹೆತ್ತ ಜೀವಗಳ ತಲ್ಲಣಗಳನ್ನು ಅಭಿವ್ಯಕ್ತಿಸುವ ಯತ್ನವಾಗಿ ರೂಪುಗೊಂಡ ಈ ಕತೆ ಅಂತಃಕರಣ, ಸಹಾನುಭೂತಿಯಂತಹ ಮಾನವೀಯ ಮೌಲ್ಯಗಳನ್ನು ಹಣದಲ್ಲಿ ತೂಗುವ ಕ್ರೌರ್ಯವನ್ನು ಪ್ರಶ್ನಿಸುತ್ತದೆ. ನಂಬಿಕೆಯೇ ಬದುಕಿನ ಮೂಲಸ್ಥಾಯಿ. ಅದಕ್ಕೆ ಏಟು ಬಿದ್ದರೆ ಬದುಕಿನ ಸೌಧವೇ ಕುಸಿದು ಬೀಳುತ್ತದೆ. ಬದುಕಿನ ಸಾರ್ಥಕತೆ ಮತ್ತು ನಿಷ್ಫಲತೆಗಳನ್ನು 'ಬರಡುಗಾಯಿ'ಯ ಸಂಕೇತದ ಮೂಲಕ ಅನ್ವೇಷಿಸುವ ಕತೆಗಾರರ ಯತ್ನ ಗಮನ ಸೆಳೆಯುತ್ತದೆ.

ಇನ್ನೂ ತನ್ನ ಬದುಕಿನ ನೆಲೆಯನ್ನೇ ಸ್ಪಷ್ಟ ಪಡಿಸಿಕೊಳ್ಳದ ಹದಿಹರೆಯದ ಹುಡುಗನೊಬ್ಬ ತನಗೆ ಆಶ್ರಯ ನೀಡಿದ ಮನೆಯ ತನಗಿಂತ ಹಿರಿಯವಳಾದ ಅವಿವಾಹಿತ ಹೆಣ್ಣೊಬ್ಬಳ ಕುರಿತು ವಿವರಿಸಲಾಗದ ಭಾವನೆಗಳನ್ನು ಬೆಳೆಸಿಕೊಂಡು ಮಾನಸಿಕವಾಗಿ ತೊಳಲಾಡುತ್ತ ಗೊಂದಲದ ಸ್ಥಿತಿಯಲ್ಲಿರುವಾಗ ಗೆಳೆಯ ವಾಸ್ತವದತ್ತ ಅವನ ಗಮನ ಸೆಳೆಯುತ್ತಾನೆ. ಹೀಗಾಗಿ ಮೊಗ್ಗರಳಿ ಹೂವಾಗುವ ಅರಳುವ ಮೊದಲೇ ಆತ ಎಚ್ಚತ್ತು ತನ್ನ ಬದುಕಿನ ದಾರಿಯನ್ನು ಬದಲಿಸಿಕೊಳ್ಳುತ್ತಾನೆ. ಅನುಕಂಪೆಯ ಮೂಲಕ ಮೂಡುವ ಪ್ರೀತಿ ದೃಢವಾದುದಲ್ಲ ಎಂದು ನಿರೂಪಿಸುವಲ್ಲಿ 'ಮೊಗ್ಗರಳಿ ಹೂವಾಗಿ' ಕತೆ ಯಶಸ್ವಿಯಾಗಿದೆ. 'ಕನಸು ಮತ್ತು ವಾಸ್ತವ' ಕತೆಯು ಇದಕ್ಕೆ ಹೊರತಾಗಿಲ್ಲ. ಹದಿಹರೆಯದಲ್ಲಿ ಸಹಜವಾಗಿ ಮೂಡುವ ಆಸಕ್ತಿಯನ್ನು ಪ್ರೀತಿ ಎಂದು ಭಾವಿಸಿ ಕನಸಿನ ಲೋಕದಲ್ಲಿ ವಿಹರಿಸುವ ಸ್ಮಿತಾಳನ್ನು ವಾಸ್ತವದೊಂದಿಗೆ ಮುಖಾಮುಖಿಯಾಗಿಸಿ ಬದುಕು ಮುಖ್ಯವೆಂದು ಪ್ರತಿಪಾದಿಸುವ ರಮೇಶ ತನ್ನ ದಾರಿಯನ್ನು ತಾನು ಕಂಡುಕೊಳ್ಳುತ್ತಾನೆ. 'ಶಾಂತ ಕೊಳದಲೊಂದು ಕಿರುತರಂಗ' ಕತೆಯಲ್ಲಿ ಲಕ್ಷಣವಾಗಿದ್ದ ಯುವ ಪ್ರಾಧ್ಯಾಪಕಿಯೊಬ್ಬಳ ಆಸಕ್ತಿ,

ಕುತೂಹಲ, ಕ್ರಿಯಾಶೀಲತೆಗಳಿಂದ ಆಕರ್ಷಿತರಾದ ನಿವೃತ್ತ ಪ್ರಾಧ್ಯಾಪಕರೊಬ್ಬರ ಮನಸ್ಸಿನಲ್ಲಿ ತಾನು ಮೂವತ್ತು ವರ್ಷ ತಡವಾಗಿ ಹುಟ್ಟಬೇಕಿತ್ತು ಎಂಬ ಯೋಚನಾತರಂಗ ಸೃಷ್ಟಿಯಾಗುತ್ತದೆ. ಆದರೆ, ಕೊನೆಯಲ್ಲಿ 'ನೀವು ಒಂದು ಕೋನದಿಂದ ನನ್ನ ಮಗಳನ್ನೇ ಹೋಲುತ್ತೀರಿ' ಎಂದು ಹೇಳುವುದರ ಮೂಲಕ ಆ ತರಂಗದ ಅಸ್ತಿತ್ವವನ್ನು ಕೊನೆಗೊಳಿಸುತ್ತಾರೆ. ಈ ಮೂರು ಕಥೆಗಳನ್ನು ಓದುವಾಗ ಓದುಗರು ಕೊನೆಯಲ್ಲಿ ಏನೋ ಸಂಭವಿಸಲಿದೆ ಎಂಬ ಕುತೂಹಲದಿಂದಲೇ ಓದುತ್ತ ಸಾಗುತ್ತಾರೆ. ಅಂತಹ ಕುತೂಹಲವನ್ನು ಹುಟ್ಟಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಆದರೆ, ಓದುಗರ ನಿರೀಕ್ಷೆಗೆ ವಿರುದ್ಧವಾಗಿ ಕತೆಗಳನ್ನು ಮುಕ್ತಾಯಗೊಳಿಸುತ್ತಾರೆ. ಇದೇ ಯಶಸ್ವಿ ಕಥೆಗಾರನ ಮುಖ್ಯ ಲಕ್ಷಣ.

ಮೋಹನ ಹಬ್ಬು ಅವರ ಪ್ರಕಟಿತ ಮತ್ತು ಅಪ್ರಕಟಿತ 32 ಕತೆಗಳಲ್ಲಿ ನನ್ನ ಗಮನ ಸೆಳೆದ ಕೆಲವು ಕತೆಗಳನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಇದು ಹಬ್ಬು ಅವರ ಕತೆಗಳ ವಿಮರ್ಶೆಯಾಗಲಿ, ವಿಶ್ಲೇಷಣೆಯಾಗಲಿ ಅಲ್ಲ. ಒಬ್ಬ ಸಹೃದಯ ಓದುಗನಾಗಿ ನನ್ನ ಗ್ರಹಿಕೆ ನಿಲುಕಿದ ಅಂಶಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ. ಈ ಕತೆಗಳಲ್ಲದೇ, ಇನ್ನೂ ಅನೇಕ ಕತೆಗಳು ತಮ್ಮ ವಿಶಿಷ್ಟತೆಯಿಂದ ಗಮನ ಸೆಳೆಯುತ್ತವೆ. ತನ್ನ ಭಯಾನಕ ಚಹರೆ ಮತ್ತು ಕ್ರೂರ ಕೃತ್ಯದಿಂದ ಜೈಲುಪಾಲಾಗಿ, ಬಿಡುಗಡೆಯ ನಂತರ ಎಳೆಯ ಜೀವವನ್ನು ಉಳಿಸಲು ತನ್ನ ಪ್ರಾಣವನ್ನು ಬಲಿ ಕೊಟ್ಟ 'ಕೆಂಪಂಗಿ ಕನ್ನ', ವಿಧವೆಯ ಬಾಳಿನಲ್ಲಿ ತಂಪನ್ನೆರಚುವ 'ವೈಶಾಖದ ಮಳೆ', ಪವಿತ್ರ ಸಂಬಂಧಗಳ ನಡುವೆ ನುಸುಳುವ ಅನೈತಿಕತೆ ಮೂಡಿಸುವ 'ಬಿರುಕು', ಸೃಜನಶೀಲತೆಯ ಪ್ರಕ್ರಿಯೆಯನ್ನೇ ಪ್ರಶ್ನಿಸುವ ಕತೆಯ ಕಥೆ', ಜಾತಿ ವ್ಯವಸ್ಥೆಯ ಕರಾಳ ಮುಖವನ್ನು ಅನಾವರಣಗೊಳಿಸುವ 'ವಿವಾಹವೆಂಬ ಪ್ರಹಸನ', ಕೌಟುಂಬಿಕ ಬದುಕಿನ ವಿರಸ-ಮನಸ್ತಾಪಗಳ 'ನೆಲೆ' ಕತೆಗಳು ಗಮನಾರ್ಹವೆನಿಸುತ್ತವೆ.

ವಿಜ್ಞಾನದ ಪ್ರಾಧ್ಯಾಪಕರಾದರೂ ಪ್ರೊ. ಹಬ್ಬು ತಮ್ಮ ಸುತ್ತಲಿನ ಬದುಕನ್ನು ಸಂವೇದನಾಶೀಲತೆಯಿಂದ ನೋಡುತ್ತಾರೆ. ಆದ್ದರಿಂದ, ಬದುಕಿನ ವಿವಿಧ ಮಜಲುಗಳನ್ನು ಕಥೆಗಳನ್ನಾಗಿಸಲು ಅವರಿಗೆ ಸಾಧ್ಯವಾಗಿದೆ. ನಮ್ಮ ನಾಡಿನ ವಿವಿಧ ಪ್ರದೇಶಗಳ, ಜಾತಿ-ಜನಾಂಗಗಳ ಭಾಷೆಯನ್ನು ಅವರು ಸಮರ್ಥವಾಗಿ ಬಳಸಿದ್ದಾರೆ. ಇದು ಸುತ್ತಲಿನ ಸಾಮಾಜಿಕ ಪರಿಸರದೊಂದಿಗೆ ಅವರು ಹೊಂದಿರುವ ನಿಕಟಸಂಬಂಧವನ್ನು ಸೂಚಿಸುತ್ತದೆ. ಅವರ ಕಥೆಗಳ ವಸ್ತು, ಪಾತ್ರ, ಸನ್ನಿವೇಶಗಳು ವಾಸ್ತವ ಬದುಕಿನಿಂದ ಪ್ರೇರಣೆ ಪಡೆದಿವೆ. ಅವರಿಗೆ ಮನುಷ್ಯನ ವಿವಿಧ ಬಗೆಯ ಸ್ವಭಾವವನ್ನು ತಮ್ಮ ಕತೆಗಳ ಮೂಲಕ ಚಿತ್ರಿಸುವುದು ಮುಖ್ಯವಾಗಿದೆ. ವಿಶೇಷವಾದ ತಂತ್ರವನ್ನು ಬಳಸದೆ, ಸರಳವಾಗಿ ನಿರೂಪಿಸಿರುವುದರಲ್ಲಿ ಅವರ ವಿಶಿಷ್ಟತೆಯಿದೆ. ಅವರಲ್ಲಿರುವ ಉತ್ಸಾಹ, ಜೀವನಪ್ರೀತಿ, ಕ್ರಿಯಾಶೀಲತೆಗಳು ಇನ್ನೂ ಮಹತ್ವದ ಕತೆಗಳ ಸೃಷ್ಟಿಗೆ ಕಾರಣವಾಗಲಿದೆ ಎಂಬ ನಿರೀಕ್ಷೆ ನಮ್ಮೆಲ್ಲರದು.